ಮೂಲ ದಾವಾ ಸಂಖ್ಯೆ. 127/2017 ಪಿ ಡಬ್ಲ್ಯೂ 1
(ದಿನಾಂಕ 09-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)
ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ವಿ ಎನ್ ವಕೀಲರಿಂದಃ-

ಸರ್ವೆ ನಂ.107 ಸಿ ಒಟ್ಟು 6 ಎಕರೆ 80 ಸೆಂಟ್ಸ ಇದೆ ಎಂದರೆ ಸರಿ. ಅದು ಮೂಲತಃ ಉಗ್ಗಣ್ಣನವರ ದೊಡ್ಡದೇವಪ್ಪರವರ ಹೆಸರಿನಲ್ಲಿತ್ತು ಎಂದರೆ ಸರಿ. ಉಗ್ಗಣ್ಣನವರ ದೇವಪ್ಪ ಇವರಿಗೆ 2 ಜನ ಗಂಡು ಮಕ್ಕಳು ಎಂದರೆ ಸರಿ ಅವರೆಂದರೆ ದೊಡ್ಡಕರಿಯಪ್ಪ ಮತ್ತು ಸಣ್ಣಕರಿಯಪ್ಪ ಎಂದರೆ ಸರಿ. ಸಣ್ಣಕರಿಯಪ್ಪ ಇವರ ಹೆಂಡತಿ ಹೆಸರು ಹನುಮವ್ವ ಎಂದರೆ ಸರಿ ಅವಳು ನನ್ನ ಅಜ್ಜಿ ಎಂದರೆ ತಾಯಿಯ ತಾಯಿ ಎಂದರೆ ಸರಿ. ಸದರಿ 6 ಎಕರೆ 80 ಸೆಂಟ್ಸ ಜಮೀನಿನಲ್ಲಿ 3 ಎಕರೆ 40 ಸೆಂಟ್ಸ ಜಮೀನು ದೊಡ್ಡಕರಿಯಪ್ಪ ಇವರಿಗೆ ಮತ್ತು 3 ಎಕರೆ 40 ಸೆಂಟ್ಸ ಜಮೀನು ಸಣ್ಣಕರಿಯಪ್ಪ ಇವರಿಗೆ ಇರುತ್ತದೆಂದರೆ ಸರಿಯಲ್ಲ. 3 ಎಕರೆ 40 ಸೆಂಟ್ಸ ಜಮೀನು ದೊಡ್ಡಕರಿಯಪ್ಪ ಇವರ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಉಗ್ಗಣ್ಣನವರ ದೊಡ್ಡ ಕರಿಯಪ್ಪ ಇವರಿಗೆ 3 ಜನ ಮಕ್ಕಳು ಎಂದರೆ ಸರಿಯಲ್ಲ. ಅವರೆಂದರೆ ದೊಡ್ಡನಾಗಪ್ಪ, ಹುಲುಗಪ್ಪ ಮತ್ತು ಭರಮವ್ವ ಎಂದರೆ ಸರಿಯಲ್ಲ. ದೊಡ್ಡಕರಿಯಪ್ಪ ಮರಣದ ನಂತರ ಅವರ ದೊಡ್ಡ ಮಗಹುಲುಗಪ್ಪನವರ ಹೆಸರಿನಲ್ಲಿ ಸದರಿ ಜಮೀನಿನ ಪಹಣಿಯಾಯಿತು ಎಂದರೆ ಸರಿಯಲ್ಲ. ಸದರಿಯವನ ಮರಣದ ನಂತರ ಅವರ ಹೆಂಡತಿ ಮಕ್ಕಳು ಸೇರಿ 1 ನೇ ಪ್ರತಿವಾದಿಗೆ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಅದಕ್ಕೆ ಭರಮವ್ವನ ಮಗಳಾದ ನಾಗೇಂದ್ರವ್ವ ಇವಳು ಒಪ್ಪಿಗೆ ಕೊಟ್ಟಳು ಎಂದರೆ ಸಂಬಂಧ ಇಲ್ಲ. ಸದರಿ 3 ಎಕರೆ 40 ಸೆಂಟ್ಸ ಜಮೀನಿಗೆ ಸಂಬಂಧಿಸಿದಂತೆ ಸದರಿ ಹಕ್ಕುಬಿಡುಗಡೆ ಪತ್ರಧಾರದ ಮೇಲೆ 1ನೇ ಪ್ರತಿವಾದಿ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿರುತ್ತದೆಂದರೆ ಸರಿಯಲ್ಲ. ದಾವಾ ಸರ್ವೆ ನಂಬರಿನಲ್ಲಿ 3 ಎಕರೆ 40 ಸೆಂಟ್ಸ ಜಮೀನು ಸಣ್ಣಕರಿಯಪ್ಪ ಇವರ ಭಾಗಕ್ಕೆ ಬಂದಿದೆ ಎಂದರೆ ಸಾಕ್ಷಿಯು ಸದರಿ ಜಮೀನು ಸಣ್ಣ ಕರಿಯಪ್ಪನಿಗೆ ಸಂಬಂಧಿಸಿದ್ದು ಇರುತ್ತದೆನ್ನುತ್ತಾರೆ.

ನಮ್ಮ ದೊಡ್ಡಮ್ಮನ ಹೆಸರು ಉಗ್ಗಣ್ಣನವರ ಹನುಮಮ್ಮ. ಆಕೆಗೆ ದತ್ತಾತ್ರೇಯ ಮತ್ತು ಫಕೀರಮ್ಮ ಮಕ್ಕಳು ಹಾಗೂ ಅವರು ನನಗೆ ಸಂಬಂಧದಿಂದ ಸಹೋದರಿ ಮತ್ತು ಸಹೋದರ ಆಗುತ್ತಾರೆಂದರೆ ಸರಿ. ನನ್ನ ತಾಯಿಯ ತಾಯಿ ಹೆಸರು ಹನುಮವ್ವ ಎಂದರೆ ಸರಿ. ಸದರಿ ಹನುಮವ್ವ ಸಣ್ಣಕರಿಯಪ್ಪನ ಹೆಂಡತಿ ಎಂದರೆ ಸರಿ. ಸದರಿ ಹನುಮವ್ವ ಇವಳು ಸಣ್ಣಕರಿಯಪ್ಪನವರ ಭಾಗಕ್ಕೆ ಮಾತ್ರ ಹಕ್ಕುದಾರಳು ಎಂದರೆ ಸರಿ. ಸಣ್ಣಕರಿಯಪ್ಪನ ಭಾಗಕ್ಕೆ ಬಂದ ಜಮೀನನ್ನು ಹನುಮವ್ವ ಇವಳು ದೊಡ್ಡಮ್ಮನ ಮಗಳಿಗೆ ಸೆಟ್ಲಮೆಂಟ್ ಡೀಡ್ ಮಾಡಿಕೊಟ್ಟಳೆಂದರೆ ಸರಿಯಲ್ಲ. ಸದರಿಯವರು ಸದರಿ ಜಮೀನನ್ನು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ತಾಯಿ ಸಣ್ಣಕರಿಯಪ್ಪ ಇವಳ ಎರಡನೇ ಮಗಳು ಎಂದರೆ ಸರಿ. ನನ್ನ ತಾಯಿ ಸಣ್ಣಕರಿಯಪ್ಪನ ಭಾಗಕ್ಕೆ ಮಾತ್ರ ಹಕ್ಕುದಾರಳು ಎಂದರೆ ಸರಿ. ನನ್ನ ಅಜ್ಜಿ ದೊಡ್ಡಹನುಮಮ್ಮ ಇವಳಿಗೆ ಸಂಪೂರ್ಣ 6 ಎಕರೆ 80 ಸೆಂಟ್ಸ ಜಮೀನಿಗೆ ಸಂಬಂಧಿಸಿದಂತೆ ಸೆಟ್ಲಮೆಂಟ್ ಡೀಡ್ ಮಾಡಿಕೊಡಲು ಅಧಿಕಾರ ಇರಲಿಲ್ಲವೆಂದರೆ ಸರಿಯಲ್ಲ. ಅವರಿಗೆ ಮಾತ್ರ 3

ಮೂಲ ದಾವಾ ಸಂಖ್ಯೆ. 127/2017 ಪಿ ಡಬ್ಲ್ಯೂ 1

ಎಕರೆ 40 ಸೆಂಟ್ಸ ಜಮೀನಿಗೆ ಹಕ್ಕು ಇತ್ತು ಎಂದರೆ ಸರಿಯಲ್ಲ. ಸದರಿ ಸೆಟ್ಲಮೆಂಟ್ ಡೀಡ್ 2 ನೇ ಪ್ರತಿವಾದಿಗೆ ಯಾವುದೇ ರೀತಿ ಬಂಧಕಾರಿಯಾಗಿರುವುದಿಲ್ಲವೆಂದರೆ ಸರಿಯಲ್ಲ. ಸೆಟ್ಲಮೆಂಟ್ ಡೀಡಿನಾಧಾರದ ಮೇಲೆ ಪಹಣಿಯಾಗಿರುವುದಿಲ್ಲ. ಸದರಿ ಸೆಟ್ಲಮೆಂಟ್ ಡೀಡ್ ನಮ್ಮ ಬಳಿ ಇದೆ. ಸದರಿ ಸೆಟ್ಲಮೆಂಟ್ ಡೀಡಿನಾಧಾರದ ಮೇಲೆ ಖಾತೆ ಬದಲಾವಣೆ ಮಾಡಲು ನಮ್ಮ ತಾಯಿ ಪ್ರಯತ್ನಪಟ್ಟಿರುತ್ತಾಳೆ. ಸದರಿ ದಾವೆಯು ಕಾಲಪರಿಮಿತಿಯಡಿಯಲ್ಲಿ ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ.

ಉಗ್ಗಣ್ಣನವರ ಹುಲುಗಪ್ಪನವರ ಹೆಸರಿನಲ್ಲಿರುವ ಕಂದಾಯ ದಾಖಲಾತಿಗಳನ್ನು ನೀವು ಅಥವಾ ನಿಮ್ಮ ತಾಯಿ ಪ್ರಶ್ನಿಸಿದ್ದೀರಾ ಎಂದರೆ ಇಲ್ಲ. ನೀವು ಉಗ್ಗಣ್ಣನವರ ಹುಲುಗಪ್ಪನವರ ಹೆಸರಿನಲ್ಲಿರುವ ಕಂದಾಯ ದಾಖಲೆಗಳನ್ನು ಪ್ರಶ್ನಿಸದೇ ಇರುವುದರಿಂದ ದಾವೆ ದಾಖಲಿಸಲು ನಿಮಗೆ ಯಾವುದೇ ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ಉಗ್ಗಣ್ಣನವರ ಹುಲುಗಪ್ಪನ ಜೀವಿತಾವಧಿಯಲ್ಲಿ ದಾವೆ ದಾಖಲಿಸಿದ್ದರೇ ಸತ್ಯಾಂಶ ತಿಳಿಯುತ್ತದೆನ್ನುವ ಕಾರಣಕ್ಕಾಗಿ ಅವರ ಮರಣಾನಂತರ ಈ ದಾವೆಯನ್ನು ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಸಿರುತ್ತೀರಿ ಎಂದರೆ ಸರಿಯಲ್ಲ.

ದಾವಾಸ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿ 2019 ರಲ್ಲಿ ನೊಂದಾಯಿತ ದಾನಪತ್ರ ಮಾಡಿರುತ್ತಾರೆಂದರೆ ಸರಿಯಲ್ಲ. ಅಲ್ಲಿಂದ ಇಲ್ಲಿಯವರೆಗೂ ದಾವಾಸ್ತಿಯಲ್ಲಿ 2 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ನಾವು ದಾವಾಸ್ತಿಯಲ್ಲಿ ಯಾವತ್ತೂ ಸ್ವಾಧೀನದಲ್ಲಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಮ್ಮ ಅಜ್ಜಿಗೆ, ನಮ್ಮ ತಾಯಿಗೆ ಮತ್ತು ನಮಗೆ ಯಾದೇ ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾ ಜಮೀನಿಗೆ ಮೌಲ್ಯ ಹೆಚ್ಚಿಗೆಯಾಗಿರುವುದರಿಂದ ಹೇಗಾದರೂ ಮಾಡಿ ದಾವಾಸ್ತಿಯನ್ನು ಕಬಳಿಸಲು ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ